ಪತ್ರಿಕಾ ಪ್ರಕಟಣೆ
ಮಾರ್ಚ್ 29, 2007

**ಮಾರ್ಚ್ 31ರಂದು ಬ್ಯಾಂಕಿಂಗ್ ವ್ಯವಹಾರದ ವೇಳೆ ಮುಕ್ತಾಯದ ನಂತರವೂ ಭಾರತೀಯ ರಿಸರ್ವ್ ಬ್ಯಾಂಕ್ ಕರ ಪಾವತಿಗಳನ್ನು ಸ್ವೀಕರಿಸುತ್ತದೆ.**

ಕರ ಪಾವತಿದಾರರ ಅನುಕೂಲಕ್ಕಾಗಿ, ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಮುಂಬಯಿ ಮತ್ತು ನವೀಮುಂಬಯಿ ಕಚೇರಿಗಳಲ್ಲಿ, ಕರಗಳ ಸಂಬಂಧ ನಗದು ಜಮೆಯನ್ನು 2007ರ ಮರ್ಚ್ 31ರಂದು ಸಂಜೆ 4 ಗಂಟೆಯವರೆಗೆ ಸ್ವೀಕರಿಸುವುದು. ಸರ್ಕಾರಕ್ಕೆ ಸಲ್ಲಿಸಬೇಕಾದ ಕರ ಪಾವತಿಗೆ ಸಂಬಂಧಿಸಿದ ಚೆಕ್ಕು / ಇತರೆ ಸಂಲೇಖಗಳನ್ನು (ಇನ್‌ಸ್ಟ್ರುಮೆಂಟ್ಸ್) 2007ರ ಮಾರ್ಚ್, 31ರಂದು ಸಂಜೆ 5 ಗಂಟೆಯವರೆಗೂ ಸ್ವೀಕರಿಸಲಾಗುವುದು.

ಏಜನ್ಸಿ ಬ್ಯಾಂಕುಗಳಾದ ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಸಹವರ್ತಿ ಬ್ಯಾಂಕುಗಳಿಗೆ ಹಾಗು ನಿರ್ದಿಷ್ಟ ಪಡಿಸಿದ ಖಾಸಗಿ ಬ್ಯಾಂಕುಗಳಿಗೂ ಸಹ ಬ್ಯಾಂಕುಗಳ ಸಾಮಾನ್ಯ ಬ್ಯಾಂಕಿಂಗ್ ವ್ಯವಹಾರ ವೇಳೆಯ ನಂತರವೂ ಎಂದರೆ ಸಂಜೆ 5 ಗಂಟೆಯವರೆಗೂ ಕರಗಳನ್ನು ಸ್ವೀಕರಿಸುವಂತೆ ಸೂಚನೆ ನೀಡಿದೆ.

2007ರ ಮರ್ಚ್ 31ಕ್ಕೆ ಮುಗಿಯುವ ವಿತ್ತೀಯ ವರ್ಷಕ್ಕೆ ನೀಡಿರುವ ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕಾಗಿ

ಭಾರತೀಯ ರಿಸರ್ವ್ ಬ್ಯಾಂಕ್ ಕರ ಪಾವತಿದಾರರನ್ನು ಈ ಮೂಲಕ ಕೋರಿದೆ.

ಅಜಿತ್ ಪ್ರಸಾದ್
ವ್ಯವಸ್ಥಾಪಕರು